C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸೆಷನ್ಸ್ ಕೇಸ್ ನಂಬರ್ಃ 78/2019

**ಚಾ.ಸಾ.-27      ಪ್ರಾ.ಸಾ.-15**

| | |
|---|---|
| **ಸಾಕ್ಷಿದಾರರ ಹೆಸರು** | **ಆರ್. ಶ್ರೀಕಾಂತ್** |
| **ತಂದೆಯ ಹೆಸರು** | **ಲೇಟ್ ರಾಮಚಂದ್ರನ್** |
| **ವಯಸ್ಸು** | **47 ವರ್ಷಗಳು** |
| **ಉದ್ಯೋಗ** | **ಡಿ.ವೈ.ಎಸ್.ಪಿ ಸಿಸಿಪಿಎಸ್ ಮೈಸೂರು ಜಿಲ್ಲೆ** |
| **ವಾಸ** | **ಮೈಸೂರು** |

**ದಿನಾಂಕಃ 24.11.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು ದಿಃ24.10.2016 ರಿಂದ ದಿಃ27.11.2018 ರವರಗೆ ಮಳವಳ್ಳಿ ಗ್ರಾಮಾಂತರ ವೃತ್ತದ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ18.11.2016 ರಂದು ಈ ಪ್ರಕರಣದ ಕಡತವನ್ನು ಚಾಸಾ- 26 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಅಲ್ಲಿ ಚಿಕಿತ್ಸೆಯಲ್ಲಿ ಇದ್ದ ಚಾಸಾ- 1 ರವರು ಕೃತ್ಯ ಸಮಯ ಧರಿಸಿದ್ದ ಸಿಮೆಎಣ್ಣೆ ಸಿಕ್ತ ಅವರ ಬಟ್ಟೆಗಳನ್ನು ಸಂಗ್ರಹಿಸಿಕೊಡುವಂತೆ ಕೋರಿಕೆಯನ್ನು ಚಾಸಾ- 23 ರವರಿಗೆ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ- 24 ರವರಿಗೆ ಚಾಸಾ- 1 ರವರ ಹೇಳಿಕೆಯನ್ನು ದಾಖಲಿಸಲು ಮನವಿ ಪತ್ರವನ್ನು ನೀಡಿರುತ್ತೇನೆ.

3. ದಿಃ19.11.2016 ರಂದು ಚಾಸಾ- 1 ರವರು ಕೃತ್ಯ ಸಮಯ ಧರಿಸಿದ್ದ ಸೀಮೆಎಣ್ಣೆ ಸಿಕ್ತ ಬಟ್ಟೆಗಳನ್ನು ಚಾಸಾ- 23 ರವರು ಸಂಗ್ರಹಿಸಿ ಸೀಲ್ ಮಾಡಿ ಚಾಸಾ- 25 ರವರ

ಮೂಲಕ ನನಗೆ ಕಳುಹಿಸಿಕೊಟ್ಟದ್ದನ್ನು ಸ್ವೀಕರಿಸಿಕೊಂಡು ಪಿ.ಎಫ್ ಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಭಟ್ಟೆಗಳನ್ನು ಗುರುತಿಸಬಲ್ಲೆ. ಅವುಗಳನ್ನು ಈಗಾಗಲೇ ಎಂಒ–1 ರಿಂದ 4 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ- 24 ರವರು ಚಾಸಾ- 1 ರವರ ಮರಣೋನ್ಮುಖ ಹೇಳಿಕೆಯನ್ನು ದಾಖಲಿಸಿ ಅವರ ಕಛೇರಿಯ ಸಿಬ್ಬಂದಿಯ ಮೂಲಕ ಕಳುಹಿಸಿಕೊಟ್ಟಿದ್ದನ್ನು ಸ್ವೀಕರಿಸಿಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ- 2 ಮತ್ತು 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

4. ಅದೇ ದಿನ ಕೃತ್ಯ ಸ್ಥಳವಾದ ನೆಲಮಾಕನಹಳ್ಳಿ ಗ್ರಾಮದ ಆರೋಪಿತರ ಮನೆಗೆ ಭೇಟಿ ನೀಡಿದಾಗ ಮನೆ ಬೀಗ ಹಾಕಿದ್ದು ಆರೋಪಿತರು ತಲೆಮರೆಸಿಕೊಂಡಿರುವುದಾಗಿ ಕಂಡುಬಂದಿದ್ದು ಆದಕಾರಣ ಕೃತ್ಯ ಸ್ಥಳದ ಮಹಜರ್ ಕ್ರಮ ಜರುಗಿಸಿಸಲು ಮನೆ ಬೀಗ ಹೊಡೆದು ಮಹಜರ್ ಕ್ರಮ ಜರುಗಿಸಲು ಅನುಮತಿ ಕೋರಿ ನ್ಯಾಯಾಲಯಕ್ಕೆ ಕೋರಿಕೆಯನ್ನು ಸಲ್ಲಿಸಿ ನ್ಯಾಯಾಲಯದಿಂದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–11** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–11(ಎ)** ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಅನುಮತಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–12** ಎಂದು ಗುರುತಿಸಲಾಗಿದೆ.

5. ದಿಃ20.11.2016 ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ- 8 ರವರ ಮೂಲಕ ಮನೆಯ ಬೀಗವನ್ನು ಹೊಡೆದು ಚಾಸಾ- 1 ರವರು ತೋರಿಸಿಕೊಟ್ಟಂತೆ ಚಾಸಾ- 6 ಮತ್ತು 7 ರವರ ಸಮಕ್ಷಮ ಕೃತ್ಯ ಸ್ಥಳದ ಮಹಜರನ್ನು ತಯಾರಿಸಿರುತ್ತೇನೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೆ ನಿಪಿ–3 ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–3(ಸಿ)** ಎಂದು ಗುರುತಿಸಲಾಗಿದೆ. ಮಹಜರ್ ಸಮಯ ಕೃತ್ಯ ಸ್ಥಳದಲ್ಲಿ ಇದ್ದ ಎರಡು ಲೀಟರ್ ಸಾಮರ್ಥ್ಯದ ಖಾಲಿ ಸೀಮೆಎಣ್ಣೆಯ ಬಿಳಿ ಕ್ಯಾನನ್ನು, ಸೀಮೆಂಟ್ ಗಾರೆ ಚೂರುಗಳು, ಸಾದಾ ಗಾರೆ ಚೂರು, ಸ್ಟೀಲ್ ಬೀಗಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ವಸ್ತುಗಳನ್ನು ಪಿ.ಎಫ್ ಗೆ ಅಳವಡಿಸಿ ನ್ಯಾಯಾಲಯಕ್ಕೆ

ನಿವೇದಿಸಿಕೊಂಡಿರುತ್ತೇನೆ. ಸದರಿ ವಸ್ತುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಎಂಒ–5 ರಿಂದ 8 ಎಂದು ಗುರುತಿಸಲಾಗಿದೆ. ಮಹಜರ್ ಸಮಯ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ನಕ್ಷೆಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–13** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–13(ಎ)** ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ- 4, 5, 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

6. ದಿಃ21.11.2016 ರಂದು ಚಾಸಾ- 20 ಮತ್ತು 21 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ23.11.2016 ರಂದು ಚಾಸಾ- 11, 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ25.11.2016 ರಂದು ಚಾಸಾ- 10, 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ28.11.2016 ರಂದು ಚಾಸಾ- 14 ರಿಂದ 17 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ05.12.2016 ರಂದು 1 ಮತ್ತು 2ನೇ ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿದ್ದು ಸದರಿಯವರನ್ನು ವಿಚಾರಣೆಗೆ ಒಳಪಡಿಸಿ ದಸ್ತಗಿರಿ ಕ್ರಮ ಜರುಗಿಸಿ ದಸ್ತಗಿರಿ ಮಾಡಿ ನ್ಯಾಯಾಲಯದ ಆದೇಶದ ಮೇರೆಗೆ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ಸದರಿ 1ನೇ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ. 2ನೇ ಆರೋಪಿಯನ್ನು ಗುರುತಿಸಬಲ್ಲೆ. ಅದೇ ದಿನ ಚಾಸಾ- 18, 19 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

7. ದಿಃ16.12.2016 ರಂದು ಎಂಒ–1 ರಿಂದ 7 ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಎಫ್.ಎಸ್.ಎಲ್ ಬೆಂಗಳೂರಿಗೆ ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ದಿಃ17.12.2016 ರಂದು ಚಾಸಾ- 1 ರವರು 1ನೇ ಆರೋಪಿಯ ಜೊತೆಯಲ್ಲಿ ಮದುವೆ ಕಾಲದಲ್ಲಿ ತೆಗೆಸಿದ 5 ಪೋಟೋಗಳನ್ನು ಮತ್ತು ಮದುವೆಯ ಲಗ್ನಪತ್ರಿಕೆಯನ್ನು ಠಾಣೆಗೆ ತಂದು ಹಾಜರುಪಡಿಸಿದ್ದು ಅವುಗಳನ್ನು ಚಾಸಾ- 9 ಮತ್ತು 10 ರವರ ಸಮಕ್ಷಮ ನಿಪಿ–4 ಮಹಜರ್ ಮೂಲಕ ವಶಪಡಿಸಿಕೊಂಡಿರುತ್ತೇನೆ. ಸದರಿ ಮಹಜರಿನಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–4(ಸಿ)** ಎಂದು ಗುರುತಿಸಲಾಗಿದೆ. ಸದರಿ ಲಗ್ನಪತ್ರಿಕೆ ಮತ್ತು ಪೋಟೋಗಳನ್ನು ಈಗ

ನೋಡುತ್ತಿದ್ದು ಅವುಗಳನ್ನು ನಿಪಿ–4 ಮತ್ತು 5 ಎಂದು ಗುರುತಿಸಲಾಗಿದೆ. ಸದರಿ ವಸ್ತುಗಳನ್ನು ಪಿ.ಎಫ್ ಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

8. ದಿಃ20.12.2016 ರಂದು ಕೃತ್ಯ ಸ್ಥಳದ ಮಾಲೀಕತ್ವದ ದಾಖಲೆಯನ್ನು ಒದಗಿಸುವಂತೆ ಚಾಸಾ-22 ರವರಿಗೆ ಕೋರಿಕೆ ಸಲ್ಲಿಸಿ ನಿಪಿ–7 ರಂತೆ ದಾಖಲೆಯನ್ನು ಪಡೆದುಕೊಂಡಿರುತ್ತೇನೆ. ದಿಃ06.01.2017 ರಂದು ಚಾಸಾ- 1 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ- 13 ರವರಿಂದ ನಿಪಿ–8 ರಂತೆ ಪಡೆದುಕೊಂಡಿರುತ್ತೇನೆ. ನಂತರ ತನಿಖೆ ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತೇನೆ.

9. ದಿಃ12.10.2017 ರಂದು ಎಫ್.ಎಸ್.ಎಲ್ ವರದಿಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಎಫ್.ಎಸ್.ಎಲ್ ವರದಿಯನ್ನು ಮತ್ತು ಎಫ್.ಎಸ್.ಎಲ್ ನ ಮಾದರಿ ಸೀಲನ್ನು ಈಗ ನೋಡುತ್ತಿದ್ದು ಅವುಗಳನ್ನು **ನಿಪಿ–14 ಮತ್ತು ನಿಪಿ–15** ಎಂದು ಗುರುತಿಸಲಾಗಿದೆ. ಎಫ್.ಎಸ್.ಎಲ್ ವರದಿಯಂತೆ ಎಂಒ–1, 2, 3, 5 ಮತ್ತು 6 ರಲ್ಲಿ ಸೀಮೆಎಣ್ಣೆಯ ಅಂಶಗಳು ಪತ್ತೆಯಾಗಿರುವುದಾಗಿ ನಮೂದಿಸಿ ವರದಿ ಬಂದಿರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ವಿ.ಆರ್ ವಕೀಲರಿಂದ:**

10. ಈ ಪ್ರಕರಣದ ಕಡತವನ್ನು ಚಾಸಾ- 26 ರವರಿಂದ ಪಡೆದುಕೊಂಡ ನಂತರ ತನಿಖೆ ಪೂರೈಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸುವ ವರೆಗೂ ಚಾಸಾ- 1 ರವರ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ಚಾಸಾ- 23 ರವರು ಸಂಗ್ರಹಿಸಿ ನೀಡಿರುತ್ತಾರೆ ಎನ್ನುವ ಎಂಒ–1 ರಿಂದ 4 ಬಟ್ಟೆಗಳನ್ನು ಚಾಸಾ- 23 ರವರಿಂದ ಸ್ವೀಕರಿಸುವ ಸಮಯ ಯಾವುದೇ ಮಹಜರನ್ನು ತಯಾರಿಸಿರುವುದಿಲ್ಲ. ಚಾಸಾ- 23 ರವರಿಗೆ ಎಂಒ–1 ರಿಂದ 4 ಬಟ್ಟೆಗಳನ್ನು ಸಂಗ್ರಹಿಸಬೇಕೆಂದು ಯಾವುದೇ ಲಿಖಿತ ಕೋರಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕೋರಿಕೆಯ ಪ್ರತಿಯನ್ನು ದೋಷಾರೋಪಣಾ ಪತ್ರದೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಎಂಒ–1 ರಿಂದ 4 ಬಟ್ಟೆಗಳನ್ನು ಆಸ್ಪತ್ರೆಯಿಂದ ಚಾಸಾ- 23 ರವರು ಸಂಗ್ರಹಿಸಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಎಂಒ–1 ರಿಂದ 4 ಬಟ್ಟೆಗಳನ್ನು ಚಾಸಾ- 1

ರವರ ಜೊತೆಗೆ ಶಾಮಿಲಾಗಿ ಸುಳ್ಳಾಗಿ ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

11. ಚಾಸಾ- 1 ರವರ ಮರಣೋನ್ಮುಖ ಹೇಳಿಕೆಯನ್ನು ದಾಖಲಿಸಬೇಕೆಂದು ಅವರಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯಾಧಿಕಾರಿಗಳಿಗೆ ಯಾವುದೇ ಕೋರಿಕೆಯನ್ನು ಸಲ್ಲಿಸಿರುವುದಿಲ್ಲ. ಚಾಸಾ- 24 ರವರಿಗೆ ಚಾಸಾ- 1 ರವರ ಮರಣೋನ್ಮುಖ ಹೇಳಿಕೆಯನ್ನು ದಾಖಲಿಸಬೇಕೆಂದು ಯಾವುದೇ ಲಿಖಿತ ಕೋರಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಲಿಖಿತ ಕೊರಿಕೆಯ ಪ್ರತಿಯನ್ನು ದೋಷಾರೋಪಣಾ ಪತ್ರದೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಚಾಸಾ- 24 ರವರು ಚಾಸಾ-1 ರವರ ಮರಣೋನ್ಮುಖ ಹೇಳಿಕೆಯನ್ನು ದಾಖಲಿಸಿಕೊಂಡಿರುವ ಬಗ್ಗೆ ಚಾಸಾ- 24 ರವರ ಕಛೇರಿಯಿಂದ ಯಾವುದೇ ಪತ್ರ ವ್ಯವಹಾರ ಆಗಿರುವುದಿಲ್ಲ. ನಿಪಿ–2 ಮರಣೋನ್ಮುಖ ಹೇಳಿಕೆಯನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿವಸ ಚಾಸಾ- 24 ರವರು ಚಾಸಾ- 1 ರವರ ಯಾವುದೇ ಮರಣೋನ್ಮುಖ ಹೇಳಿಕೆಯನ್ನು ದಾಖಲಿಸಿರುವುದೂ ಇಲ್ಲ ಅದನ್ನು ನಮ್ಮ ಕಛೇರಿಗೆ ನೀಡಿರುವುದೂ ಇಲ್ಲ ಎಂದರೆ ಸರಿಯಲ್ಲ. ಚಾಸಾ- 2 ಮತ್ತು 3 ರವರು ನನ್ನ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

12. ನಾನು ಕಛೇರಿಗೆ ದಿನನಿತ್ಯ ಹಾಜರಾಗುವ ಬಗ್ಗೆ ಮತ್ತು ಭೇಟಿ ನೀಡುವ ಸ್ಥಳಗಳ ಬಗ್ಗೆ ನಮೂದಿಸುವ ಒಂದು ವಹಿಯನ್ನು ನಿರ್ವಹಿಸುತ್ತೇನೆ. ದಿಃ19.11.2016 ರಂದು ಆರೋಪಿತರ ಮನೆಗೆ ಭೇಟಿ ನೀಡಿರುವ ಬಗ್ಗೆ ಆ ಸಮಯ ಮನೆ ಬೀಗ ಹಾಕಿರುವ ಬಗ್ಗೆ ನನ್ನ ಸದರಿ ವಹಿಯಲ್ಲಿ ನಮೂದಿಸಿರುತ್ತೇನೆ. ಸದರಿ ವಹಿಯ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ದಿಃ20.11.2016 ರಂದು ಮಹಜರ್ ತಯಾರಿಸಲು ಸಹಕರಿಸುವಂತೆ ಆರೋಪಿಯ ಮನೆಯ ಅಕ್ಕಪಕ್ಕದವರಿಗೆ ನಾನು ನೋಟೀಸು ನೀಡಿರುತ್ತೇನೆ. ಆದರೆ ಅಕ್ಕಪಕ್ಕದವರು ಯಾರು ಸಹಕರಿಸಲು ಮುಂದಾಗಲಿಲ್ಲ. ಅಕ್ಕಪಕ್ಕದವರು ಸಹಕರಿಸಿರುವುದಿಲ್ಲ ಎಂದು ನಮೂದಿಸಿ ನೋಟೀಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ಮಹಜರಿನಲ್ಲಿ ಮನೆಯ ಬೀಗವನ್ನು ಹೋಡೆಯುವ ಪೂರ್ವದಲ್ಲಿ ಸದರಿ ಬೀಗ ಯಾವ ಕಂಪನಿಯದು ಎಂದು ಮಹಜರಿನಲ್ಲಿ

ನಮೂದಿಸಿರುವುದಿಲ್ಲ. ಮಹಜರ್ ಕ್ರಮ ಜರುಗಿಸುವಾಗ ಸದರಿ ಮನೆಯ ಬೀಗ ಹೊಡೆಯುವಾಗ ಆಗಲೀ ಸೀಮೆಎಣ್ಣೆ ಕ್ಯಾನ್, ಗಾರೆ ಚೂರುಗಳನ್ನು ಅಮಾನತುಪಡಿಸಿಕೊಳ್ಳುವ ಬಗ್ಗೆ ವೀಡಿಯೋ ಅಥವಾ ಪೋಟೋ ತೆಗೆಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವೀಡಿಯೋ ಅಥವಾ ಪೋಟೋಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.ೆ ಆ ದಿವಸ ನೆಲಮಾಕನಹಳ್ಳಿಯಲ್ಲಿರುವ ಆರೋಪಿಯ ಮನೆಗೆ ನಾನಾಗಲೀ ಚಾಸಾ-1ರವರಾಗಲೀ ಮತ್ತು ಪಂಚಸಾಕ್ಷಿಗಳು ಹೋಗಿರುವುದಿಲ್ಲ, ಮನೆಯ ಬೀಗ ಹೊಡೆದಿರುವುದಿಲ್ಲ, ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿರುವುದಿಲ್ಲ, ಸ್ಥಳದಿಂದ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ- 1 ರವರಹೇಳಿಕೆಯ ಮೇರೆಗೆ ನಮ್ಮ ಠಾಣೆಯಲ್ಲಿಯೇ ನಿಪಿ–3 ಮಹಜರನ್ನು ಸುಳ್ಳಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಂಚಸಾಕ್ಷಿಗಳ ಸಹಿಗಳನ್ನು ಸಹಾ ಠಾಣೆಯಲ್ಲಿಯೇ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–13 ನಕ್ಷೆಯಲ್ಲಿ ಕೃತ್ಯ ಸ್ಥಳದ ಮನೆಯ ಹಿಂಬಾಗದಲ್ಲಿ ಯಾವುದೇ ಬಾಗಿಲು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–13 ನಕ್ಷೆಯಲ್ಲಿ ರೂಮುಗಳ ಬಗ್ಗೆ ಅಡಿಗೆ ಮನೆಯ ಬಗ್ಗೆ ಹಾಲಿನ ಬಗ್ಗೆ ಮತ್ತು ಮನೆಯಲ್ಲಿ ಇರುವ ವಸ್ತುಗಳ ಬಗ್ಗೆ ನಮೂದು ಮಾಡಿರುತ್ತೇನೆ ಎಂದರೆ ಸರಿ. ಮನೆಯ ಬಾಗಿಲು ಮತ್ತು ಕಿಟಕಿಗಳ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ಕೃತ್ಯ ಸ್ಥಳದ ಮನೆ ಬೀಗ ಹಾಕಿತ್ತು ಎಂದು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ನ್ಯಾಯಾಲಯದ ಅನುಮತಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–3 ಮಹಜರ್ ಜರುಗಿಸುವ ಸಮಯ ಸ್ಥಳದಲ್ಲಿ ಯಾವುದೇ ಗಾಜಿನ ಬಳೆಗಳ ಚೂರು ಕಂಡುಬಂದಿರುವುದಿಲ್ಲ. ನಿಪಿ–13 ಕಚ್ಚಾ ನಕ್ಷೆಯನ್ನು ಕಛೇರಿಯಲ್ಲಿಯೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ- 2 ರಿಂದ 15, 18 ರಿಂದ 21 ರವರು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

13. ಚಾಸಾ-1 ಮತ್ತು 1ನೇ ಆರೋಪಿಯ ಮದುವೆ ದಿಃ29.11.2009 ಆಗಿರುವುದು ಎಂದರೆ ಸರಿ. ಈ ಪ್ರಕರಣದ ಘಟನೆ ನಡೆದಿದೆ ಎನ್ನುವ ದಿನಾಂಕಃ18.11.2016 ಆಗಿರುತ್ತದೆ. ಮದುವೆಯ 7 ವರ್ಷದ ಒಳಗೆ ಘಟನೆ ನಡೆದಿದೆ ಎಂದು ಪ್ರಕರಣ ದಾಖಲಿಸಿದ್ದರೆ ವರದಕ್ಷಿಣೆ ಕಿರುಕುಳಕ್ಕಾಗಿ ಪ್ರಕರಣ ಸೃಷ್ಟಿ ಮಾಡಲು ಅವಕಾಶ

ಇರುತ್ತದೆ ಎಂದು ಉದ್ದೇಶ ಪೂರ್ವಕವಾಗಿ ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ಹಲ್ಲೆ ಮಾಡಿ ಚಾಸಾ- 1 ರವರು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದು ಕಂಡುಬಂದಿದ್ದರೂ ಸಹಾ ನಿಪಿ-8 ಗಾಯದ ಪ್ರಮಾಣ ಪತ್ರವನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಎಂಒ-1 ರಿಂದ 7 ವಸ್ತುಗಳನ್ನು ಎಫ್.ಎಸ್.ಎಲ್ ಗೆ ತಜ್ಞರ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಂಒ- 1 ರಿಂದ 7 ವಸ್ತುಗಳಿಗೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ ಚಾಸಾ- 1 ರವರ ಮಗುವನ್ನು ನಾನು ವಿಚಾರಣೆ ಮಾಡಿರುವುದಿಲ್ಲ.

14. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಚಾಸಾ- 1 ರವರು ಆರೋಪಿತರ ಮತ್ತು ಅವರ ಕುಟುಂಬದವರ ವಿರುದ್ಧ ಬಾಗಾಂಶ ಕೋರಿ ಮಳವಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿರುವುದು ನನ್ನ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಚಾಸಾ- 1 ರವರ ಸಿವಿಲ್ ಪ್ರಕರಣಕ್ಕೆ ಅನುಕೂಲವಾಗುವಂತೆ ಈ ಸುಳ್ಳು ಪ್ರಕರಣವನ್ನು ಆರೋಪಿತರ ವಿರುದ್ದ ಸೃಷ್ಟಿಮಾಡಿರುತ್ತಾರೆ ಎಂದರೆ ಸರಿಯಲ್ಲ.

15. ಚಾಸಾ- 3 ರವರು ನನ್ನ ಮುಂದೆ ಹೇಳಿಕೆ ನೀಡುವಾಗ "ಆರೋಪಿಗಳ ಮನೆಗೆ ಹೋದ ಮೇಲೆ ಆರೋಪಿಗಳು ಕೊಟ್ಟಿದ್ದ ಒಡವೆ ಗಳನ್ನು ತೂಕ ಮಾಡಿಸಿದ್ದೀರಿ ಅದು ಹೆಚ್ಚು ಕಮ್ಮಿ ಇರುತ್ತದೆ ಎಂದು ಬೈದು ಕಿರುಕುಳ ಕೊಟ್ಟು ಚಾಸಾ- 1 ರವರನ್ನು ನಮ್ಮ ಮನೆಗೆ ಕಳುಹಿಸುತ್ತಿದ್ದರು, ಈ ಬಗ್ಗೆ ಮನೆಯಲ್ಲಿ ಒಂದು ಬಾರಿ ನರಸಿಂಹ ದೇವಸ್ಥಾನದಲ್ಲಿ 2 - 3 ಬಾರಿ ಪಂಚಾಯಿತಿ ಮಾಡಿಸಿರುತ್ತೇವೆ" ಎಂದು ಹೇಳಿಕೆ ನೀಡಿರುವುದಿಲ್ಲ.

16. ಚಾಸಾ-3 ರವರು ನನ್ನ ಮುಂದೆ ಹೇಳಿಕೆ ನೀಡುವಾಗ "ಮಾರನೆ ದಿನ 18.11.2016 ರಂದು ಮದ್ಯಾಹ್ನ 12.00 ಗಂಟೆಗೆ ನಾನು ನನ್ನ ಗಂಡ ಫ್ರಾ.ಸಾ- 1 ಮತ್ತು ಫ್ರಾ.ಸಾ- 1 ರವರ ಮಗನೊಂದಿಗೆ ಆರೋಪಿಗಳ ಮನೆಗೆ ಹೋದೆವು" ಎಂದು ಹೇಳಿಕೆ ನೀಡಿರುವುದಿಲ್ಲ.

17. ಚಾಸಾ- 3 ರವರು ನನ್ನ ಮುಂದೆ ಹೇಳಿಕೆ ನೀಡುವಾಗ "ನಾವುಗಳು ಪುನಃ ಫ್ರಾ.ಸಾ– 1 ರವರನ್ನು ಮನೆಯ ಒಳಗಡೆ ಕರೆದುಕೊಂಡು ಹೊಗಿ ಏಕೆ ಅವಳನ್ನು ಮನೆಯ ಹೊರಗಡೆ ಕಳುಹಿಸುತ್ತಿದ್ದೀಯಾ ಎಂದು ಕೇಳಿದಾಗ ಫ್ರಾ.ಸಾ- 1 ರವರ ಅತ್ತೆ ಮತ್ತು ಗಂಡ ಅಂದರೆ 1 ಮತ್ತು 2ನೇ ಆರೋಪಿಗಳು ಆಕೆಯ ಮೇಲೆ ಸೀಮೆಎಣ್ಣೆ ಎರಚಿದರು" ಎಂದು ಹೇಳಿಕೆ ನೀಡಿರುವುದಿಲ್ಲ.

18. ಚಾಸಾ- 3 ರವರು ನನ್ನ ಮುಂದೆ ಹೇಳಿಕೆ ನೀಡುವಾಗ " ಫ್ರಾ.ಸಾ-1 ರವರ ಬಳೆಯು ಒಡೆದುಹೋಗಿದ್ದವು, ಫ್ರಾ.ಸಾ- 1 ರವರಿಗೆ ಪ್ರಜ್ಞೆ ಇರಲಿಲ್ಲ, ನಾವು ಆಕೆಗೆ ನೀರು ಎರಚಿ ಸುದಾರಿಸಿ ಬೈಕಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು" ಎಂದು ಹೇಳಿಕೆ ನೀಡಿರುವುದಿಲ್ಲ.

19. ಚಾಸಾ- 3 ರವರು ನನ್ನ ಮುಂದೆ ಹೇಳಿಕೆ ನೀಡುವಾಗ "ಆರೋಪಿಗಳು ಮನೆಯ ಹಿಂಭಾಗದಿಂದ ಹೋಡಿ ಹೋದರು" ಎಂದು ಹೇಳಿಕೆ ನೀಡಿರುವುದಿಲ್ಲ.

20. ಈ ಪ್ರಕರಣದ ತನಿಖಾ ಕಾಲದಲ್ಲಿ ಆರೋಪಿತರು ಯಾವುದೇ ಆರೋಪ ಎಸಗಿರುವುದಿಲ್ಲ ಎಂದು ಕಂಡುಬಂದಿದ್ದರೂ ಸಹಾ ಚಾಸಾ- 1 ರವರಿಗೆ ಅನುಕೂಲವಾಗುವಂತೆ ಸುಳ್ಳು ದಾಖಲೆಗಳನನು ಸೃಷ್ಟಿಸಿ ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**